ಒಂದು ಹುಲ್ಲಿನ ಮೆದೆ ಅಂದರೆ ೪ ಮೋಟರ್ ೩ ಮೋಟರ್ ಇರುತ್ತದೆ. ಅದೊಂದು ಫಸಲನ್ನು ಮಾರಿದರೆ ೧೫ ಸಾವಿರ ರೂಪಾಯಿ ರೈತರಿಗೆ ಬರುತ್ತದೆ. ೧೫ ಸಾವಿರ ರೂಪಾಯಿಗಳು ಬೆಲೆ ಬಾಳತಕ್ಕ ಫಸಲು ನಷ್ಟವಾಗುತ್ತದೆ. ತೆಂಗಿನ ಗಿಡಗಳು ೨೦-೩೦ ನಷ್ಟವಾಗಿದೆ. ೧೯೮೨-೮೩ ರಲ್ಲಿ ೩ ಜನ ೧೯೮೩-೮೪ ರಲ್ಲಿ ೧೩ ಜನ ಮತ್ತು ೧೯೮೩-೮೪ರಲ್ಲಿ ೫ ಜನ ಒಟ್ಟು ೨೧ ಜನ ಆನೆಗಳ ಹಾವಳಿಯಿಂದ ಸತ್ತಿದ್ದಾರೆ ಎಂದು ಹೇಳಿದ್ದೀರಿ. ಒಂದೊಂದು ಮನೆಗೆ ಮೂರು ಮೂರು ಎಂದು ಲೆಕ್ಕ ಹಾಕಿದರೂ ಬಡಪಟ್ಟು ನಷ್ಟವಾಗಿದೆ. ರೈತರು ಅಧಿಕಾರಿಗಳಿಗೆ ದೂರನ್ನು ಕೊಟ್ಟು ತಕ್ಷಣ ಅದನ್ನು ಪರಿಶೀಲನೆಮಾಡಿ ಕ್ರಮ ತೆಗೆದುಕೊಳ್ಳುವುದಿಲ್ಲ. ರೈತರಿಗೆ ತಿರುಗಿ ತಿರುಗಿ ಬೇಜಾರಾಗಿ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಡಬೇಕು. ರೈತರು ಆರ್ಜಿ ಕೊಟ್ಟು ಕೂಡಲೇ ಒಂದೆರಡು ದಿನಗಳಲ್ಲಿ ಮಹಜರ್ ಮಾಡಿ ಕ್ರಮ ತೆಗೆದುಕೊಳ್ಳಲಿಕ್ಕೆ ತಾವು ವ್ಯವಸ್ಥೆ ಮಾಡಿಕೊಡುತ್ತೀರಾ? ಮತ್ತೆ ತೆಂಗಿನ ಸಸಿಗಳು ರೀಸೆಂಟಾಗಿ ಪಿಲ್ಲೆ ತಿಂಗಳಲ್ಲಿ ಕೆಟ್ಟಿವೆ ಎಂದು ೪ ಗ್ರಾಮಗಳಿಂದ ಆರ್ಜಿಗಳು ಹೋಗಿವೆ. ಆದರೂ ರೈತರ ಆರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಂಡಿಲ್ಲ. ರೈತರು ಆರ್ಜಿ ಕೊಟ್ಟ ಕೂಡಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಡಿ. ಮತ್ತು ಆಕ್ಟ್ಟುಮುಲ್ಲಾಗಿ ಫಸಲು ಎಷ್ಟು ಹೋಗಿದೆ ಅದಕ್ಕೆ ಪರಿಹಾರ ಕೊಡಲಿಕ್ಕೆ ಸರ್ಕಾರ ವ್ಯವಸ್ಥೆ ಮಾಡಿಕೊಡುತ್ತದೆಯೇ? ಮತ್ತು ರೈತರುಗಳ ಮನೆ ಬಾಗಿಲಿಗೆ ಅರಣ್ಯಾಧಿಕಾರಿಗಳು ಹೋಗಿ ಯೋಗ್ಯ ರೀತಿಯಿಂದ ವಿಚಾರಿಸಿ ಅಲ್ಲಿ ರಿಕಾರ್ಡಗಳನ್ನು ಮಾಡಲಿಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಈಗ ಅರಣ್ಯ ಇಲಾಖೆಗೆ ಯಾವ ಯಾವ ಪ್ರಕರಣಗಳು ಬಂದಿವೆ ಅವುಗಳಿಗೆ ಪರಿಹಾರ ಕೊಡಲಾಗಿದೆ. ನಿರ್ದಿಷ್ಟವಾದ ಪ್ರಕರಣಗಳಿಗೆ ವಿಂಡಿತವಾಗಿ ಗಮನ ಕೊಡುತ್ತೇವೆ. ರೈತರ ಮನೆ ಬಾಗಿಲಿಗೆ ಹೋಗಬೇಕು ಎಂಬ ಉತ್ತಮ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಇದನ್ನು ಪರಿಶೀಲಿಸುತ್ತೇನೆ. ಆನೆಗಳ ಕಾಟವನ್ನು ತಪ್ಪಿಸಲಿಕ್ಕೆ ಕಳೆದ ವರ್ಷ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ವರ್ಷ ಎನ್.ಆರ್.ಇ.ಪಿ.ಯಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕು ಎಂದು ಶ್ರೀಮತಿ ನಾಗರತ್ನಮ್ಮನವರೂ ಕೂಡ ಮೊನ್ನೆ ಹೇಳಿದರು. ಹೆಚ್ಚಿನ ಹಣ ಕೊಟ್ಟು, ಆನೆಗಳ ಹಾವಳಿಯನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಹದೇವ್.—ಆನೆಗಳು ಬರದಹಾಗೆ ಸುತ್ತಲು ಕಂದಕ ಹೊಡೆಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ — ಆನೆಗಳನ್ನು ಓಡಿಸುವುದಕ್ಕೆ ಪಟಾಕಿಗಳನ್ನು ಕೊಡುತ್ತಿದ್ದೇವೆ. ಅರಣ್ಯ ಪ್ರದೇಶಗಳಲ್ಲಿ ಲೈಟುಗಳನ್ನು ಕೂಡ ತಪ್ಪಿಸಲಿಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಗೋವಿಂದ ಗೌಡ.—ನಮ್ಮ ಭಾಗದಲ್ಲಿ ಕೂಡ ಹಂದಿಗಳು ಬೆಳೆಯನ್ನೆಲ್ಲಾ ಹಾಳು ಮಾಡುತ್ತವೆ. ಅವುಗಳನ್ನು ಶಿಕಾರಿ ಮಾಡುವುದಕ್ಕೆ ಅವಕಾಶ ಕೊಡುತ್ತೀರ ?

SRI B. A JIVIJAJA—That animal has not been declared as vermin ಶ್ರೀ ಲೈಸೆನ್ಸ್ ಕೊಟ್ಟರೆ ಇದೇ ಸಂತತಿಯನ್ನೇ ಜನರು ಹಾಳುಮಾಡುತ್ತಾರೆ. ಅದಕ್ಕೋಸ್ಕರ ಲೈಸೆನ್ಸ್ ಕೊಟ್ಟಿಲ್ಲ, They can scare away the animal.

ಕೃಷ್ಣರಾಜನಗರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಬಗ್ಗೆ

೨೬೨. ಶ್ರೀ ಎಸ್. ಸಂಜಪ್ಪ (ಕೃಷ್ಣರಾಜನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರವು ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಗುರುತಿಸಿದೆಯೇ ?

(ಆ) ಸರ್ಕಾರವು ಕೃಷ್ಣರಾಜನಗರದಲ್ಲಿ ಕೈಗಾರಿಕಾ ಪೇಟ್ಟೆಗಳನ್ನು ಕಟ್ಟಲು ಉದ್ದೇಶಿಸಿದೆಯೇ ?

(ಇ) ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಉದ್ದಿಮೆಗಳಿಂದ ಆರ್ಜಿ ಬಂದಿದೆಯೇ ?

(ಅ) ಗುರುತಿಸಿದೆ. ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--

(ಆ) ಇಲ್ಲಿಯವರೆಗೆ ಇಲ್ಲ.

(ಇ) ಅರ್ಜಿಗಳು ಬಂದಿರುವುದಿಲ್ಲ.

ಮಾನ್ಯ ಅಧ್ಯಕ್ಷರೆ, ಸಪ್ಲಿಮೆಂಟರಿ ಕೇಳುವುದಕ್ಕೆ ಮುಂಚೆ ಒಂದು ಮಾತನ್ನು ಹೇಳುತ್ತೇನೆ. ನಗರಸಭೆಯವರನ್ನು ಸರ್ವೆ ನಂ. ೫೦ರ ಜಮೀನನು ಬಿಟ್ಟುಕೊಡಬೇಕೆಂದು ಕೇಳಿದ್ದೇವೆ, ಜೊತೆಗೆ ಸಂಬಂಧ ಪಟ್ಟ ತಹಶೀಲ್ದಾರ್‌ರವರಿಗೆ ಸೂಕ್ತವಾದ ಜಮೀನು ಇದ್ದರೆ ತಿಳಿಸಬೇಕೆಂದು ತಿಳಿಸಿದ್ದೇವೆ. ಜಮೀನು ದೊರೆತ ಕೂಡಲೇ ಷೆಡ್ಡುಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ನಂಜಪ್ಪ.-- ಕೃಷ್ಣರಾಜನಗರ ಪುರಸಭೆಯವರು ಸರ್ವೆ ನಂ. ೫೦ರ ಜಮೀನನ್ನು ಬಿಟ್ಟುಕೊಟ್ಟರೆ ಕೂಡಲೇ ಕೈಗಾರಿಕಾ ಷೆಡ್ಡುಗಳನ್ನು ಕಟ್ಟಲಿಕ್ಕೆ ಅನುಮತಿ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.--ಪುರಸಭೆಯವರು ಜಮೀನನು ಕೊಟ್ಟರೆ ಕೂಡಲೇ ಕೈಗಾರಿಕಾ ಷೆಡ್ಡುಗಳನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆ.

ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕಿರಿಯ ಮತ್ತು ಸಹಾಯಕ ಕಾರ್ಯಪಾಲ ಅಭಿಯಂತರರನ್ನು ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಒಳಗೂಡಿಸುವ ಬಗ್ಗೆ

೨೮೩. ಶ್ರೀ ಎಂ. ಪಿ. ಕರ್ಕಿ (ಕುಮಟ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಕಿರಿಯ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಲೋಕೋಪಯೋಗಿ ಇಲಾಖೆಯಲ್ಲಿ ಒಳಗೂಡಿಸಿದವರ ಸಂಖ್ಯೆ ಎಷ್ಟು.

ಆ) ಇದರಲ್ಲಿ ಎಷ್ಟು ಜನಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ಖಾಯಂ ಹುದ್ದೆಗೆ ನೇಮಕ ಮಾಡಲಾಗಿದೆ;

ಇ) ಇತರೇ ವರ್ಗಗಳ ಬೇಡಿಕೆಯನ್ನು ನಿರಾಕರಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ)	ಸಹಾಯಕ ಕಾರ್ಯಪಾಲಕ ಅಭಿಯಂತರು ೯	ಕಿರಿಯ ಅಭಿಯಂತರು ೭೬
ಆ)	೨	—
ಇ)	ಇಲ್ಲ	ಇಲ್ಲ
ಈ)	ಅನ್ವಯಿಸುವುದಿಲ್ಲ.	

ಶ್ರೀ ಎಂ. ಪಿ. ಕರ್ಕಿ.—ಮಾನ್ಯ ಅಧ್ಯಕ್ಷರೇ ನನ್ನ (ಇ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಪರಿಪತ್ರದ ನಂ. ಪಿಡಬ್ಲ್ಯೂಡಿ ೩೨೮ ಎಸ್‌ಎಎಸ್ ೮೨--೮೦ ದಿನಾಂಕ ೨೬-೬-೮೨ರಲ್ಲಿ ತಾಲ್ಲೂಕು ಬೋರ್ಡುಗಳಲ್ಲಿ ಕೆಲಸ ಮಾಡುವ ಇಂಜಿನಿಯರುಗಳಿಂದ ಬೇಕಿಲ್ಲವೆಂದು ತೀರ್ಮಾನ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.–ಸ್ವಾಮಿ, ತಾಲ್ಲೂಕುಬೋರ್ಡು ಸಿಬ್ಬಂದಿ ಎಂದರೆ ಬರೀ ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಮಾತ್ರವಲ್ಲ, ರೆವಿನ್ಯೂ, ವಿದ್ಯಾಭ್ಯಾಸ ಹಾಗೂ ಇನ್ನಿತರ ಇಲಾಖೆಗಳ ಸಿಬ್ಬಂದಿಯನ್ನು ಆಯಾಯಾ ಇಲಾಖೆಗೆ ಕಳುಹಿಸುವ ನಿರ್ಣಯವನ್ನು ೧೯೭೯ರಲ್ಲಿ ತೆಗೆದುಕೊಂಡಿದ್ದಾರೆ. ೭೬ ಜೂನಿಯರ್ ಇಂಜಿನಿಯರ್‌ಗಳು ೯ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿಯರುಗಳ ಪೈಕಿ ಎರಡು ಜನಕ್ಕೆ ಮಾತ್ರ ಆ ಒಂದು ಆರ್ಡರ್ ಪ್ರಕಾರ ಮಾಡಿದ್ದಾರೆ. ಈ ವಿಚಾರ ನಮ್ಮ ಸರ್ಕಾರದ